ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಆಡಳಿತಾಧಿಕಾರಿಗಳನ್ನು ದಿನಾಂಕ ೩೦-೬-೧೯೮೯ರ ವರೆಗೆ ನೇಮಕ ಮಾಡಲಾಗಿದೆ.

ಆ) ಜೂನ್ ೧೯೯೦ರ ಒಳಗಾಗಿ ಮಹಾನಗರ ಪಾಲಿಕೆಗಳಂ ಹಾಗೂ ಪುರಸಭೆ/ನಗರಸಭೆಗಳಿಗೆ ಚುನಾವಣೆ ನಡೆಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ದಸರಾ ವಸ್ತು ಪ್ರದರ್ಶನಕ್ಕೆ ಶಾಶ್ವತ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ.

೧೮೯. ಶ್ರೀಮತಿ ಮುಕ್ತರುನ್ನೀಸಾ ಬೇಗಂ (ನರಸಿಂಹರಾಜ).— ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ದೊಡ್ಡಕೆರೆ ಮೈದಾನದ ದಸರಾ ವಸ್ತು ಪ್ರದರ್ಶನಕ್ಕೆ ಶಾಶ್ವತ ಕಟ್ಟಡ ನಿರ್ಮಾಣ ಮಾಡಲು ರಾಜ್ಯ ಸರ್ಕಾರ ಯೋಚಿಸಿದೆಯೇ ;

ಆ) ಪ್ರಾಗಿದ್ದಲ್ಲಿ, ಅದರ ಅಂದಾಜು ಬೆಲೆ, ನಿರ್ಮಾಣ ಕಾರ್ಯ ಕೈಗೊಳ್ಳುವ ಸಮಯ ಹಾಗೂ ಅದರ ಮುಕ್ತಾಯ ಯಾವಾಗ ;

ಇ) ಇಲ್ಲವಾದರೆ ನಿರ್ಮಾಣ ಕಾರ್ಯ ಕೈಗೊಳ್ಳದಿರಲು ಕಾರಣವೇನು ;

ಶ್ರೀ ಎಸ್. ಆರ್. ಬೊಮ್ಮಾಯಿ (ವಾರ್ತಾ, ಪ್ರವಾಸೋದ್ಯಮ ಮಂತ್ರಿಗಳು).—

ಅ) ಹೌದು.

ಆ) ಉನ್ನತ ಯೋಜನೆಯು ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ಬಂದ ಸಂಘದ ಅರ್ಜಿ ನಿವೇಶನಗಳ ಮಂಜೂರಿ ಬಗ್ಗೆ.

೨೬೭ ಶ್ರೀ ಗೋಪಾಲ್ ಎಂ. ಕಾನಡೆ, (ಸಿರ್ಸಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದ ಗೃಹ ಮಂಡಳಿಗೆ ೧೯೮೬ ರಿಂದ ಇದುವರೆಗೆ ಪಾಸಗಿ ಸಂಘಗಳಿಂದ ಮನೆ ನಿವೇಶನದ ಜಾಗದ ಮಂಜೂರಿಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಇದುವರೆಗೆ ಎಷ್ಟು ಸಂಸ್ಥೆಗಳಿಗೆ ಜಾಗವನ್ನು ಮಂಜೂರು ಮಾಡಿದ್ದೀರಿ?

ಇ) ಇದುವರೆಗೆ ಉಳಿದ ಅರ್ಜಿಗಳಿಗೆ ನಿವೇಶನ ಮಂಜೂರಾಗದೆ ಇರಲು ಕಾರಣವೇನು?

ಶ್ರೀ ಆರ್.ವಿ. ದೇಶಪಾಂಡೆ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೫೨

ಆ) ೨೩

ಇ) ೬ ಅರ್ಜಿಗಳು ತಿರಸ್ಕರಿಸಲ್ಪಟ್ಟಿದ್ದು ಇನ್ನುಳಿದ ೨೩ ಅರ್ಜಿಗಳನ್ನು ಕರ್ನಾಟಕ ಗೃಹ ಮಂಡಳಿಯ ವಿಭಾಗೀಯ ಕಛೇರಿಗಳಿಗೆ ವರದಿಯನ್ನು ಒಪ್ಪಿಸಲು ಕಳುಹಿಸಿಕೊಡಲಾಗಿದೆ.

ಬೆಂಗಳೂರು ಜಲಮಂಡಲಿಯಲ್ಲಿ ಕೆಲಸ ಮಾಡುತ್ತಿರುವ ಸೂಪರ್‌ನ್ಯೂಮರರಿ ನೌಕರರ ಬಗ್ಗೆ.

೨೯೧ ಶ್ರೀ ಗೋಪಾಲ್ ಎಂ. ಕಾನಡೆ, (ಸಿರ್ಸಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಲ್ಲಿ ಕೆಲಸ ಮಾಡುತ್ತಿರುವ ಸೂಪರ್‌ನ್ಯೂಮರರಿ ನೌಕರರ ಸಂಖ್ಯೆ ಎಷ್ಟು?